ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 04 –01–2021.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಪಿ.ಸಿ.ಎಸ್. ವಕೀಲರಿಂದ.**

ಈ ದಾವೆಯನ್ನು ಯಾರು ಯಾರ ವಿರುದ್ದ ಯಾವ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯಲ್ಲಿ ಸಾಕ್ಷ್ಯವನ್ನು ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ವಗೈರೆ ಬಂದಿರುವುದಿಲ್ಲ, 1 ನೇ ಪ್ರತಿವಾದಿಯ ಕೋರಿಕೆಯ ಮೇರೆಗೆ ನಾನು ಇಂದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಯಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ರಿ. ಸ. ನಂಃ 129/1 ನನಗೆ ಸೇರಿದ ಜಮೀನು ಎಂಬುದನ್ನು ತೋರಿಸುವಂತಹ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ರಿ. ಸ. ನಂಃ 128 ಆಗಿದ್ದು, ನಮ್ಮ ಆಸ್ತಿಯ ರಿ. ಸ. ನಂಃ 108 ಆಗಿರುತ್ತದೆ. ಸಾಕ್ಷಿಯು ಮುಂದುವರೆದು ನಾನು ಶಾಲೆ ಕಲಿತಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಬರೆಯಿಸುವ ಕಾಲಕ್ಕೆ ಯಾವುದೇ ಪ್ರಮಾಣ ಪತ್ರ ಗಳನ್ನುತಂದಿರುವುದಿಲ್ಲ.

2) ನನಗೆ ಸೇರಿದ ಜಮೀನು ನನ್ನ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಈ ದಾವೆಯಲ್ಲಿ ವಾದಿಯರು ಯಾರು ಮತ್ತು ಪ್ರತಿವಾದಿಯರು ಯಾರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಸೇರಿದ ಜಮೀನು ಮೂಲತಃ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಮತ್ತು ನಂತರ ಅದು ಯಾವಾಗ ಹಿಸ್ಸೆ ಆಗಿರುತ್ತದೆ ಎಂಬುದರೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ವಾದಿಯರು ಎಷ್ಟು ಜನ ಇರುತ್ತಾರೆ ಮತ್ತು ಅವರ ತಂದೆ ಯಾರು ಎಂಬುದು ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯನ್ನು ಕಳೆದ 30-40 ವರ್ಷಗಳಿಂದ ನೋಡುತ್ತಾ ಇದ್ದು, ಆತನ ಅಣ್ಣ ಗುಡ್ಡಪ್ಪ ಕುಂಚೂರು ಯಾರು ಎಂಬುದು ಗೊತ್ತಿಲ್ಲ ಮತ್ತು ಆತನನ್ನು ನಾನು ನೋಡಿಯೇ ಇರುವುದಿಲ್ಲ.

3) 1 ನೇ ಪ್ರತಿವಾದಿಯ ತಂದೆ ಮಲ್ಲಾರೆಪ್ಪ ಕುಂಚೂರು ಇವನ ಬಗ್ಗೆಯು ನನಗೆ ಗೊತ್ತಿರುವುದಿಲ್ಲ. ನನಗೆ ಯಾವುದೇ ಸ್ವಂತ ಜಮೀನು ಇರುವುದಿಲ್ಲ, ಆದರೆ ನಾನು ಎತ್ತುಗಳನ್ನು ಬಾಡಿಗೆ ತಂದು ಹೊಲ ಹೊಡಿಸುತ್ತೇನೆ. ನಾನು 1 ನೇ ಪ್ರತಿವಾದಿಯ ಎತ್ತುಗಳನ್ನು ಪಡೆದು ಸಾಗುವಳಿ ಮಾಡುತ್ತೇನೆ ಎಂದರೆ ಬಾಡಿಗೆ ಕೊಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ನನ್ನ ಮತ್ತು ದಾವಾ ಆಸ್ತಿಯ ಚಕ್ಕುಬಂದಿಗಳನ್ನು ಹೇಳಲು ಬರುವುದಿಲ್ಲ.

4) ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಎತ್ತಗಳನ್ನು ಗಳೆ ತೆಗೆದುಕೊಂಡು ಒಕ್ಕಲುತನ ಮಾಡುವ ಕಾರಣದಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.